# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 386 (485)
2. ಮಾನ್ಯ ಸದಸ್ಯರ ಹೆಸರು – ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ – 10/03/2025
4. ಉತ್ತರಿಸುವ ಸಚಿವರು – ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಿನಾಂಕ:18.02.2024 ಮತ್ತು 10.07.2024 ರಂದು ನಿಯಮ–32 ರಡಿಯಲ್ಲಿ ಶಿಕ್ಷಣಾಧಿಕಾರಿಗಳು / ತತ್ಸಮಾನ ವೃಂದಕ್ಕೆ ಎಷ್ಟು ಅಧಿಕಾರಿಗಳಿಗೆ ಬಡ್ತಿ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ; (ಹೈ.ಕ ಉಳಿಕೆ ಮೂಲ ವೃಂದ); ದಿನಾಂಕ: 31.12.2024 ರವರೆಗೆ ಖಾಲಿ ಇದ್ದು ಶಿಕ್ಷಣಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು; (ಹೈ.ಕ ಮತ್ತು ಉಳಿಕೆ ಮೂಲ ವೃಂದದ ಸಂಪೂರ್ಣ ಮಾಹಿತಿ ನೀಡುವುದು)</td><td>ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ ಹುದ್ದೆಗಳಿಗೆ ಎದುರಾಗಿ ಗ್ರೂಪ್–ಬಿ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂಬಂಧ ದಿನಾಂಕ: 10.07.2024 ಮತ್ತು 18.07.2024 ರಂದು ಉಳಿದ ಮೂಲ ವೃಂದದ 108 ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 27 ಅಧಿಕಾರಿಗಳ ಪ್ರಸ್ತಾವನೆಯನ್ನು ಬೆಂಗಳೂರು ಆಯುಕ್ತಾಲಯದಿಂದ ಸಲ್ಲಿಸಲಾಗಿರುತ್ತದೆ.<br><br>ದಿನಾಂಕ: 31.12.2024ರ ಅಂತ್ಯಕ್ಕೆ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ್ದ ಉಳಿದ ಮೂಲ ವೃಂದದ 107 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 15 ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಆ)</td><td>ದಿನಾಂಕ:05.10.2024 ಮತ್ತು 30.01.2025 ರಂದು ನಡೆದ ಡಿ.ಸಿ.ಪಿ. ಸಭೆಗಳಲ್ಲಿ ನಿಯಮ–32ರಡಿಯಲ್ಲಿ ಎಷ್ಟು ಅಧಿಕಾರಿಗಳಿಗೆ ಬಡ್ತಿ ನೀಡಲು ತೀರ್ಮಾನಿಸಲಾಗಿದೆ; (ಹೈ.ಕ ಮತ್ತು ಉಳಿಕೆ ಮೂಲ ವೃಂದ); ಈ ದಿನಾಂಕಗಳಂದು ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿಗಳಿಗೆ ಮೀಸಲಿರಿಸಿದ ಹುದ್ದೆಗಳು ಖಾಲಿ ಇದ್ದರೂ ಕೂಡ ಕೇವಲ 02 ಅಧಿಕಾರಿಗಳಿಗೆ ಮಾತ್ರ ಬಡ್ತಿ ನೀಡಲು ಕಾರಣವೇನು;</td><td rowspan="2">ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ದಿನಾಂಕ: 05.10.2024 ಮತ್ತು 30.01.2025 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳಲ್ಲಿ ಪರಿಗಣಿಸಿರುವ ಹುದ್ದೆಗಳ ವಿವರ ಕೆಳಕಂಡಂತಿದೆ:–<br><br><table>
<tr><th>ಕ್ರ ಸಂ.</th><th>ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆದ ದಿನಾಂಕ</th><th>ಉಳಿದ ಮೂಲ ವೃಂದ</th><th>ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ</th><th>ಒಟ್ಟು</th></tr>
<tr><td>1</td><td>05.10.2024</td><td>78*</td><td>02</td><td>80</td></tr>
<tr><td>2</td><td>30.01.2025</td><td>11**</td><td>–</td><td>11</td></tr>
<tr><td colspan="2">ಒಟ್ಟು</td><td>89</td><td>02</td><td>91</td></tr>
</table><br>* 02 ಅಧಿಕಾರಿಗಳ ಪ್ರಕರಣಗಳನ್ನು ಮುಚ್ಚಿದ ಲಕೋಟೆಯಲ್ಲಿರಿಸಲಾಗಿದೆ.</td></tr>
<tr><td>ಇ)</td><td>ಈಗಾಗಲೇ ಬಡ್ತಿಗಾಗಿ ಪ್ರಸ್ತಾವನೆ ಸಲ್ಲಿಸಿ ಸುಮಾರು 08 ತಿಂಗಳಾದರೂ ಹಾಗೂ ಕಲ್ಯಾಣ ಕರ್ನಾಟಕ ಭಾಗದವರಿಗೆ ಮೀಸಲಿರಿಸಿರುವ ಹುದ್ದೆಗಳು ಖಾಲಿ ಇದ್ದರೂ ಕೂಡ ಇಲ್ಲಿಯವರೆಗೆ ಬಡ್ತಿ ನೀಡದೆ ಇರುವುದರಿಂದ ಅನ್ಯಾಯವಾಗಿದ್ದು, ಈ ಸಮಸ್ಯೆಯನ್ನು ಯಾವ ಕಾಲಮಿತಿಯಲ್ಲಿ ಬಗೆಹರಿಸಿ ಬಡ್ತಿಯನ್ನು ನೀಡಲಾಗುತ್ತದೆ?</td></tr>
</table>

| | | |
|---|---|---|
| | | ** ದಿನಾಂಕ: 05.10.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲು ಪರಿಗಣಿಸಲಾಗಿದ್ದ 80 ಅಧಿಕಾರಿಗಳ ಪೈಕಿ ಉಳಿದ ಮೂಲ ವೃಂದದ 07 ಅಧಿಕಾರಿಗಳು ಮುಖ್ಯ ಶಿಕ್ಷಕರ ವೃಂದದಲ್ಲಿಯೇ ಮುಂದುವರೆಯಲು ಇಚ್ಛಿಸಿರುವುದರಿಂದ ಸದರಿ ಹುದ್ದೆಗಳ ಜೊತೆಗೆ ಜೂನ್ 2024ರವರೆಗೆ ಲಭ್ಯವಾಗುವ ಹುದ್ದೆಗಳನ್ನು ಪರಿಗಣಿಸಲಾಗಿದೆ.<br><br>ಪ್ರಸ್ತುತ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿಗೆ ಮೀಸಲಾದ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದ 13 ಹುದ್ದೆಗಳು ಖಾಲಿ ಇರುತ್ತವೆ.<br><br>ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್–ಬಿ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳನ್ನು ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ ಹಾಗೂ ತತ್ಸಮಾನ ವೃಂದದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂಬಂಧ ದಿನಾಂಕ:05/10/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಡಯಟ್ ಮತ್ತು ಸಿಟಿಇ ಗಳಲ್ಲಿ ಕಡಿಮೆ ಕಾರ್ಯಭಾರವಿರುವುದರಿಂದ ಉಳಿದ ಮೂಲ ವೃಂದದ 30 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 13 ಹಿರಿಯ ಉಪನ್ಯಾಸಕರು / ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಇಲಾಖಾ ಮುಂಬಡ್ತಿ ಸಮಿತಿಯು ತೀರ್ಮಾನಿಸಿರುತ್ತದೆ.<br><br>ಇಲಾಖಾ ಮುಂಬಡ್ತಿ ಸಭೆಯ ತೀರ್ಮಾನದಂತೆ ಸದರಿ ಹುದ್ದೆಗಳನ್ನು ಹೊರತುಪಡಿಸಿ ಒಟ್ಟು 71 ಅಧಿಕಾರಿಗಳನ್ನು (ಉಳಿದ ಮೂಲ ವೃಂದದ 69 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 02) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1958ರ ನಿಯಮ–32ರಡಿ ಗ್ರೂಪ್–ಎ ಕಿರಿಯ ಶ್ರೇಣಿ ಶಿಕ್ಷಣಾಧಿಕಾರಿ / ತತ್ಸಮಾನ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 245 ಡಿಜಿಎಂ 2024, ದಿನಾಂಕ:29/01/2025ರಲ್ಲಿ ಆದೇಶಿಲಾಗಿರುತ್ತದೆ (ಉಳಿದ ಮೂಲ ವೃಂದದ 07 ಅಧಿಕಾರಿಗಳು ಮುಖ್ಯ ಶಿಕ್ಷಕರ ವೃಂದದಲ್ಲಿಯೇ ಮುಂದುವರೆಯಲು ಇಚ್ಛಿಸಿ ಮನವಿ ಸಲ್ಲಿಸಿರುವುದರಿಂದ). |

ಸಂಖ್ಯೆ: ಇಪಿ 10 ಪಿಡಿಬಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು